**ಸಿ.ಸಿ.ನಂ.: 2433/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **20-01-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು –ಆರೋಪಿ ಪರ ಶ್ರೀಮತಿ. ರಾಘವಿ ನಾಯ್ಕ ವಕೀಲರಿಂದ</u>**

1. ಆರೋಪಿತನು ಯಾವ ಉದ್ಯೋಗವನ್ನು ಮಾಡುತ್ತಾನೆ ಹಾಗೂ ಆತನ ಸಂಪೂರ್ಣ ಗುರುತು ಪರಿಚಯ ನನಗೆ ಇದೆ. ಈ ಪ್ರಕರಣದ ಸಾಲವನ್ನು ನೀಡುವ ಸಂದರ್ಭದಲ್ಲಿ ನಾನು ಫಿರ್ಯಾದಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನು. ನಮ್ಮ ಫಿರ್ಯಾದಿ ಸಂಸ್ಥೆಯು ಸರಕಾರದ ಯೋಜನೆಯ ಅಡಿಯಲ್ಲಿ ಬರುತ್ತದೆ. ಸಾಲವನ್ನು ನೀಡುವ ಸಂದರ್ಭದಲ್ಲಿ ಬೈಲಾದ ಪ್ರಕಾರ ಸಾಲವನ್ನು ನೀಡಬೇಕಾಗುತ್ತದೆ ಎಂದರೆ ಸರಿ. ನಮ್ಮ ಬೈಲಾದ ಪ್ರಕಾರ ನಾವು ವ್ಯಾಪಾರ ಸಾಲ ವಯಕ್ತಿಕ ಸಾಲ ಮುಂತಾದ ಸಾಲವನ್ನು ನೀಡುತ್ತೇವೆ. ನಾವು ನಮ್ಮ ಫಿರ್ಯಾದಿಯಲ್ಲಿ ಆರೋಪಿತರಿಗೆ ಯಾವ ಉದ್ದೇಶಕ್ಕಾಗಿ ಸಾಲವನ್ನು ನೀಡಿದ್ದೇವೆ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ.

2. ಆರೋಪಿತನು ಮೀನಿನ ವ್ಯಾಪಾರವನ್ನು ಮಾಡುತ್ತಿದ್ದು, ಸದ್ರಿ ಉದ್ದೇಶಕ್ಕಾಗಿ ನಾವು ಸಾಲವನ್ನು ನೀಡಿರುತ್ತೇವೆ. ಆರೋಪಿತನು ಮೀನನ್ನು ಖರೀದಿ ಹಾಗೂ ಮಾರಾಟ ಮಾಡುವ ವ್ಯಾಪಾರವನ್ನು ಮಾಡುತ್ತಾನೆ. ಆರೋಪಿತನ ಮೀನಿನ ವ್ಯಾಪಾರದ ಕುರಿತು ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ವ್ಯಾಪಾರದ ಸಾಲವನ್ನು ನೀಡಬೇಕಾದರೆ ಅವರು ಯಾವ ರೀತಿಯ ವ್ಯಾಪಾರವನ್ನು ಮಾಡುತ್ತಾರೆಯೋ ಅದರ ಮೇಲೆ ಸಾಲವನ್ನು ನೀಡಬೇಕು ಎಂದು ನುಡಿಯುತ್ತಾರೆ. ನಾವು ವ್ಯಾಪಾರದ ಕುರಿತಾಗಿ ಯಾವುದೇ ದಾಖಲಾತಿಯನ್ನು ಪಡೆದುಕೊಳ್ಳದೇ ಸುಳ್ಳಾಗಿ ವ್ಯಾಪಾರದ ಉದ್ದೇಶಕ್ಕಾಗಿ ಸಾಲವನ್ನು ನೀಡಿದ್ದೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ.

**ಸಿ.ಸಿ.ನಂ.: 2433/2025**

ಪಿ.ಡಬ್ಲ್ಯೂ:1

3. ಆರೋಪಿತನು ಸಾಲಕ್ಕಾಗಿ ಯಾವ ದಿನಾಂಕದಂದು ಬಂದಿರುತ್ತಾನೆ ಎಂಬುವುದನ್ನು ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಸಾಲಕ್ಕಾಗಿ ಬಂದ ಸಂದರ್ಭದಲ್ಲಿ ನಮ್ಮ ಬ್ಯಾಂಕಿನ ನಮೂನೆಯ ಅರ್ಜಿಯನ್ನು ನಾವು ಅವರಿಗೆ ನೀಡುತ್ತೇವೆ. ಸಾಲಗಾರರವು ಹೇಳಿದರೆ ಸದ್ರಿ ಸಾಲದ ಅರ್ಜಿಯನ್ನು ನಮ್ಮ ಸಿಬ್ಬಂದಿಯವರು ಭರಣ ಮಾಡುತ್ತಾರೆ. ನಾವು ಸಾಲದ ಅರ್ಜಿಯನ್ನು ನೀಡುವ ಸಂದರ್ಭದಲ್ಲಿ ನಾವು ಸಾಲದ ಅರ್ಜಿಯನ್ನು ಮಾತ್ರ ಪಡೆದುಕೊಳ್ಳುತ್ತೇವೆ.

4. ಆರೋಪಿತನು ಸಾಲದ ಅರ್ಜಿಯನ್ನು ದಿನಾಂಕಃ 27/02/2021 ರಂದು ನೀಡಿರುತ್ತಾರೆ. ಸಾಲದ ಅರ್ಜಿ ನೀಡಿದ ಕೂಡಲೇ ನಾವು ಸದ್ರಿ ಸಾಲದ ಅರ್ಜಿಯನ್ನು ಪ್ರಧಾನ ಕಛೇರಿಗೆ ಕಳುಹಿಸುತ್ತೇವೆ. ಈ ಪ್ರಕರಣದ ಸಾಲವು ಯಾವ ದಿನಾಂಕದಂದು ಮಂಜೂರಾಗಿದೆ ಎಂಬುವುದನ್ನು ದಾಖಲಾತಿ ನೋಡಿ ಹೇಳಬೇಕಾಗುತ್ತದೆ. ನಮ್ಮ ಫಿರ್ಯಾದಿ ಸಂಸ್ಥೆಗೆ ಸಾಲಕ್ಕಾಗಿ ಅರ್ಜಿಗಳ ತುಂಬಾ ಬಂದಿರುತ್ತದೆ ಎಂದರೆ ಸರಿ. ಬಂದಂತಹ ಎಲ್ಲ ಸಾಲದ ಅರ್ಜಿಗಳನ್ನು ನಾವು ಪುರಸ್ಕರಿಸುವುದಿಲ್ಲ ಎಂದರೆ ಸರಿ. ಸಾಲದ ಎಲ್ಲ ದಾಖಲಾತಿಗಳು ಸರಿ ಇದ್ದರೆ ಮಾತ್ರ ನಾವು ಅವುಗಳನ್ನು ಪುರಸ್ಕರಿಸುತ್ತೇವೆ ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ